# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1098 |
| ವಿಧಾನ ಪರಿಷತ್ತ್ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್ ವಿಶ್ವನಾಥ್., (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 21-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರದ ಅಧಿಸೂಚನೆಯ ಸಂಖ್ಯೆ: HD 33 SFB 2011 ದಿನಾಂಕ: 07.07.2011 ರನ್ವಯ ಮಾನ್ಯ ಅಂದಿನ ಬೀದರ್ ದಕ್ಷಿಣ ಶಾಸಕ ರವರ ಪ್ರಶ್ನೆ ಸಂಖ್ಯೆ:1322ಕ್ಕೆ ನೀಡಿದ ಉತ್ತರದಲ್ಲಿ ಅಂದಿನವರೆಗೆ 19294 ಕಟ್ಟಡಗಳನ್ನು ಗುರುತಿಸಿದ್ದು, ಸದರಿ ಅಧಿಸೂಚನೆಯನ್ವಯ ಇಲ್ಲಿಯವರೆಗೆ ಇಲಾಖೆಯು ನೀಡಿದ ಉತ್ತರದಲ್ಲಿ 19294 ಕಟ್ಟಡಗಳಲ್ಲಿ ಇಲ್ಲಿಯವರೆಗೆ ಎಷ್ಟು ಕಟ್ಟಡಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲಾಗಿದೆ ಹಾಗೂ ನಿಯಮ ಉಲ್ಲಂಘನೆ ಮಾಡಿದ ಎಷ್ಟು ಕಟ್ಟಡ ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವ ಕ್ರಮ ಕೈಗೊಳ್ಳಲಾಗಿದೆ; (ಈ ಬಗ್ಗೆ ಕಟ್ಟಡವಾರು ಮಾಹಿತಿ ನೀಡುವುದು) | ರಾಷ್ಟ್ರೀಯ ಕಟ್ಟಡ ಸಂಹಿತೆ ಮತ್ತು ಸ್ಥಳೀಯ ನಿಯಮಾವಳಿಗಳಲ್ಲಿ ಸೂಚಿಸಲಾದ ಮಾನದಂಡಗಳನ್ನು ಪಾಲಿಸದೇ ಕಟ್ಟಡಗಳನ್ನು ನಿರ್ಮಿಸಿರುವುದರಿಂದ, ಸದರಿ ಕಟ್ಟಡಗಳಿಗೆ ನಿರಾಕ್ಷೇಪಣಾ ಪತ್ರಗಳನ್ನು ನೀಡಲು ನಿಯಮಾನುಸಾರ ಅವಕಾಶವಿರುವುದಿಲ್ಲ.<br><br>ಈ ಕಟ್ಟಡಗಳಲ್ಲಿ ಅಗ್ನಿಶಮನ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿ ಈಗಾಗಲೇ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗಿರುತ್ತದೆ.<br><br>ಏತನ್ಮಧ್ಯೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2023, ಬೆಂಗಳೂರು ದಿನಾಂಕ:27-07-2023 ರಲ್ಲಿ ಬಹುಮಹಡಿ ಕಟ್ಟಡದ ಎತ್ತರವನ್ನು 15.00 ಮೀ. ನಿಂದ 21.00 ಮೀಟರ್‌ಗೆ ಹೆಚ್ಚಿಸಿ ಆದೇಶ ಹೊರಡಿಸಿರುವುದರಿಂದ, ಪ್ರಸ್ತುತ 505 ಕಟ್ಟಡಗಳು ಮಾತ್ರ 21.00 ಮೀಟರ್ ಹಾಗೂ ಮೇಲ್ಪಟ್ಟವೆಂದು ಗುರುತಿಸಲಾಗಿರುತ್ತದೆ. ಎಲ್ಲಾ 505 ಕಟ್ಟಡಗಳಿಗೆ ಸೂಚನಾ ಪತ್ರವನ್ನು ಜಾರಿ ಮಾಡಲಾಗಿರುತ್ತದೆ.<br><br>ಸಂಬಂಧಪಟ್ಟ ಪ್ರಾಧಿಕಾರಕ್ಕೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಪತ್ರ ವ್ಯವಹಾರವನ್ನು ಮಾಡಲಾಗಿರುತ್ತದೆ. |
| (ಆ) | ಸರ್ಕಾರದ ಅಧಿಸೂಚನೆಯ ಸಂಖ್ಯೆ: HD 33 SFB 2011 ದಿನಾಂಕ: 07.07.2011 ರ ಆದೇಶದಲ್ಲಿ 15 ಮೀಟರ್ ಎತ್ತರವುಳ್ಳ ಕಟ್ಟಡಗಳಿಗೆ ಇಲಾಖೆಯಿಂದ NOC/CC ಗಳನ್ನು ಪಡೆಯದೆ ಇರುವ ಕಟ್ಟಡಗಳಿಗೆ 04 ಪಟ್ಟು ಶುಲ್ಕ (ರಾಜಸ್ವ) ವಸೂಲಿ ಮಾಡುವಂತೆ ಸೂಚಿಸಿದ್ದು. ಅದರಂತೆ 19294 ಕಟ್ಟಡಗಳ ಪೈಕಿ | ರಾಷ್ಟ್ರೀಯ ಕಟ್ಟಡ ಸಂಹಿತೆ ಮತ್ತು ಸ್ಥಳೀಯ ನಿಯಮಾವಳಿಗಳಲ್ಲಿ ಸೂಚಿಸಲಾದ ಮಾನದಂಡಗಳನ್ನು ಪಾಲಿಸದೇ ನಿರ್ಮಿಸಿರುವುದರಿಂದ ಸದರಿ ಕಟ್ಟಡಗಳಿಗೆ ನಿರಾಕ್ಷೇಪಣಾ ಪತ್ರಗಳನ್ನು ನೀಡಲು ನಿಯಮಾನುಸಾರ ಅವಕಾಶವಿರುವುದಿಲ್ಲ.<br><br>ನಿರಾಕ್ಷೇಪಣಾ ಪತ್ರಗಳನ್ನು ನೀಡದೇ ಇರುವುದರಿಂದ 04 ಪಟ್ಟು ಶುಲ್ಕವನ್ನು ವಸೂಲಿ ಮಾಡುವ ಸಂದರ್ಭ ಉದ್ಭವಿಸುವುದಿಲ್ಲ. |

| | | |
|---|---|---|
| | ಎಷ್ಟು ಕಟ್ಟಡಗಳಿಗೆ 04 ಪಟ್ಟು ಶುಲ್ಕ (ರಾಜಸ್ವ) ವಸೂಲಿ ಮಾಡಲಾಗಿದೆ; (ಅಂತಹ ಕಟ್ಟಡಗಳ ಸಂಪೂರ್ಣ ವಿವರಗಳನ್ನು ನೀಡುವುದು) | |
| (ಇ) | ತಮ್ಮ DGP & DGF & ES ರವರ ಕಛೇರಿಯ ಪತ್ರದ ಸಂಖ್ಯೆ: ಜಿ.ಬಿ.ಸಿ(1)593/2003 ದಿನಾಂಕ:02.07.2024 ಜಿ.ಬಿ.ಸಿ(2)522/23-24 ದಿನಾಂಕ:04.07.2024 ಪತ್ರಗಳನ್ನು ಗಮನಿಸಿದಾಗ ಸರ್ಕಾರದ ಅಧಿಸೂಚನೆಯಲ್ಲಿ ಸೂಚಿಸಿದ Empanelled Agency ಯನ್ನು ಆಯ್ಕೆ ಮಾಡಿರುವುದಿಲ್ಲವಾದುದರಿಂದ ಈ ಆಯ್ಕೆ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿದೆ ಎನ್ನುವುದು ನಿಜವಲ್ಲವೇ: | ದಿನಾಂಕ: 02-07-2024 ರ ಕಡತಗಳನ್ನು ಪರಿಶೀಲಿಸಲಾಗಿ, ಸದರಿ ಕಡತಗಳಲ್ಲಿನ ಪತ್ರಗಳನ್ನು ನಿಯಮಾನುಸಾರ ನೀಡಲಾಗಿರುತ್ತದೆ. ಆದುದರಿಂದ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ ಎಂದು ಅಗ್ನಿಶಾಮಕ ಇಲಾಖೆ ವರದಿ ಮಾಡಿರುತ್ತದೆ. |
| (ಈ) | ಪ್ರಧಾನ ಲೇಖಪಾಲಕರ (ಲೆಕ್ಕಪರಿಶೋಧನೆ-2) ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರುರವರ ಆಡಿಟ್ ವರದಿಯಲ್ಲಿ 14 ಬಹುಮಹಡಿ ಅಂತಸ್ತು ಕಟ್ಟಡಗಳಿಗೆ ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ಸೂಚಿಸಿದಂತೆ ಈ 14 ಕಟ್ಟಡಗಳಿಗೆ NOC/CC ನೀಡಿರುವುದಕ್ಕೆ ರೂ.240/- (4 ಪಟ್ಟು) ರಂತೆ ಪ್ರತಿ ಚದರ ಮೀಟರಿಗೆ ರಾಜಸ್ವ (ಶುಲ್ಕ) ವನ್ನು ವಸೂಲಿ ಮಾಡದೆ ರೂ.50,000/- ಗಳನ್ನು ವಸೂಲಿ ಮಾಡಿ ಈ ಬಹು ಮಹಡಿ ಕಟ್ಟಡಗಳಿಗೆ FIRE ADVISORY CERTIFICATE ನೀಡಿ ಅಗ್ನಿಶಾಮಕ ಅಧಿಕಾರಿಗಳು ಭ್ರಷ್ಟಾಚಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರಕ್ಕೆ ನಷ್ಟ ಉಂಟು ಮಾಡಿದ ಅಧಿಕಾರಿಯವರ ಮೇಲೆ ಸರ್ಕಾರ ತೆಗೆದುಕೊಂಡ ಶಿಸ್ತು ಕ್ರಮವೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ: HD 33 SFB 2011, ದಿನಾಂಕ:07.07.2011 ರನ್ವಯ ಸದರಿ 14 ಬಹುಮಹಡಿ ಕಟ್ಟಡಗಳು ರಾಷ್ಟ್ರೀಯ ಕಟ್ಟಡ ಸಂಹಿತೆ ಹಾಗೂ ಸ್ಥಳೀಯ ನಿಯಮಾವಳಿಗಳನ್ನು ಪಾಲಿಸಿ ನಿರ್ಮಾಣವಾಗಿರುವುದಿಲ್ಲ. ಆದಕಾರಣ, ನಿರಾಕ್ಷೇಪಣಾ ಪತ್ರವನ್ನು ನೀಡಲು ಅವಕಾಶವಿರುವುದಿಲ್ಲ.<br><br>ಆದ್ದರಿಂದ, ಸರ್ಕಾರಿ ಶುಲ್ಕದ 4 ಪಟ್ಟು ದಂಡ ವಸೂಲಿ ಮಾಡಿರುವುದಿಲ್ಲ.<br><br>ಸದರಿ 14 ಬಹುಮಹಡಿ ಕಟ್ಟಡಗಳಿಗೆ ಇಲಾಖೆಯಿಂದ ನಿಗದಿತ ಶುಲ್ಕವನ್ನು ಭರಿಸಿಕೊಂಡು, ಅಗ್ನಿ ಸುರಕ್ಷತಾ ದೃಷ್ಟಿಯಿಂದ ಅಗ್ನಿ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಲು ಅಗ್ನಿ ಸಲಹಾ ಪ್ರಮಾಣ ಪತ್ರ ಮಾತ್ರ ನೀಡಲಾಗಿರುತ್ತದೆ. ನಿರಾಕ್ಷೇಪಣಾ ಪತ್ರವನ್ನು ನೀಡಿರುವುದಿಲ್ಲ. |

| | | |
|---|---|---|
| (ಉ) | ಅಕೌಂಟೆಂಟ್ ಜನರಲ್ ರವರು 2023-24ನೇ ಸಾಲಿನಲ್ಲಿ ಸಲ್ಲಿಸಿರುವ ಆಡಿಟ್ ವರದಿಯನ್ವಯ ರೂ.1,92,45,000/-ಗಳ ನಷ್ಟ ಉಂಟು ಮಾಡಿದ್ದು, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು; ಇಲ್ಲದಿದ್ದಲ್ಲಿ, ಯಾವ ಕಾರಣಕ್ಕಾಗಿ ಇಲಾಖೆಯು ಸರ್ಕಾರದ ಗಮನಕ್ಕೆ ತಂದಿರುವುದಿಲ್ಲ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ನೀಡುವುದು? | ಅಕೌಂಟೆಂಟ್ ಜನರಲ್ ರವರು 2023-24ನೇ ಸಾಲಿನಲ್ಲಿ ಸಲ್ಲಿಸಿರುವ ಆಡಿಟ್ ವರದಿಯನ್ವಯ ಕ್ಲಿಯರೆನ್ಸ್ ಪತ್ರವನ್ನು ನವೀಕರಣ ಮಾಡಿಕೊಳ್ಳದೇ ಇರುವ ಬಹುಮಹಡಿ ಕಟ್ಟಡಗಳ ಮಾಲೀಕರು/ಅನುಭೋಗದಾರರಿಗೆ ನವೀಕರಣ ಮಾಡಿಕೊಳ್ಳಲು ಸೂಚನಾ ಪತ್ರವನ್ನು ಜಾರಿ ಮಾಡಲಾಗುತ್ತಿದೆ.<br><br>ಅದರಂತೆ, ಕ್ಲಿಯರೆನ್ಸ್ ಪತ್ರವನ್ನು ನವೀಕರಣ ಮಾಡಲು ಬಹುಮಹಡಿ ಕಟ್ಟಡಗಳ ಮಾಲೀಕರು/ಅನುಭೋಗದಾರರು ಅರ್ಜಿ ಸಲ್ಲಿಸುತ್ತಿದ್ದು, ನಿಯಾಮಾನುಸಾರ ಪರಿಶೀಲಿಸಿ, ಸರ್ಕಾರ ನಿಗದಿಪಡಿಸಿರುವ ನಿಗದಿತ ಶುಲ್ಕವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ನೇರವಾಗಿ ಪಾವತಿಸಿಕೊಂಡು ನವೀಕರಣ ಪತ್ರಗಳನ್ನು ನೀಡಲಾಗುತ್ತಿದೆ. |

**ಸಂಖ್ಯೆ: ಹೆಚ್‌ಡಿ 244 ಎಸ್‌ಎಫ್‌ಬಿ 2025**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**